ಗಂಜಿನೋ ನೀರೊ ಕುಡ್ಕೊಂಡು ಜೀವ್ನ ಮಾಡ್ಕಂಡ್ರಾತು ಅಂತ ಆ ಕ್ಷಣನೇ ತೀರ್ಮಾನಿಸಿ ಬುಟ್ಟಳು.

ಕೆಂಪಿಗೆ ವಿಸಯ ಗೊತ್ತಾಗಿ ಲಬೊ ಲಬೊ ಅಂತ ಬಾಯ್ಬಾಯ್ ಬಡ್ಕೊಂಡು ಜೋರಾಗಿ ಅಳ್ತಲೆ ಓಡ್ಬಂದಳು. ಗಂಡ ಬಾವಿಗೆ ಬಿದ್ದಿದ್ದನ್ನು, ಸರ್‍ಯಾದ ಸಮಯಕ್ಕೆ, ಪುಟ್ಟೀರ ಬಂದು ಬಾವಿಗ್ಬಿದ್ದ ಈರ್‍ನ ಮ್ಯಾಕೆತ್ತಿ ಬದ್ಕಿಸಿದ್ದನ್ನ ತಿಳ್ಕಂಡು ಅವ್ನ ಕಾಲಗ್ಬಿದ್ದು, "ನಮ್ಮಟ್ಟಿ ಮರ್‍ವಾದಿ ಉಳ್ಸಿ ಬುಟ್ಟೆ ಕಣಣ್ಣ, ಈವಯ್ಯ ಸತ್ತೊಗಿದ್ದಿದ್ರೆ ನಮ್ಮ ಮಾನ ಮರ್‍ವಾದಿ ಏನಾಗ್ಬೇಕಿತ್ತು. ನಾಳಿಕೆ ಮದ್ವೆ ಮಾಡೊದಾದ್ರೂ ಎಂಗೆ, ಅಳಿಮಯ್ಯ ಏನು ಅಂದ್ಕೊತಿದ್ದ, ನಾನು ಮುಂಡೆಯಾಗಿ ಸಾಯ್ಬೇಕಿತ್ತು ಅಟೇಯಾ. ನನ್ಮನೆನ್ನೂ ಉಳ್ಸಿ, ನನ್ನೂ ಉಳಿಸಿ ಬಿಟ್ಟೆ ಕಣಣ್ಣ. ಆ ದ್ಯಾವ್ರೆ ನೀನು ಕಣಣ್ಣ" ಅಂತ ಯೋಳಿ ಅಲ್ಲೆ ಕುಸ್ದು ಮತ್ತಷ್ಟು ಜೋರಾಗಿ ಅಳತೊಡಗಿದಳು.

ಆಕಾಸನೆ ತಲೆ ಮ್ಯಾಲೇ ಬಿದ್ದಂಗೆ ಅಳ್ತ ಇದ್ದ ಅವ್ವನ್ನ ಕಂಡು "ಸುಮ್ಕಿರವ್ವ, ಯಾಕಿಂಗೆ ಅಳ್ತಿಯಾ, ಅಪ್ಪಯ್ಯ ಸತ್ತಿಲ್ಲವಲ್ಲ, ದ್ಯಾವರ್ದಯೆ ನಮ್ಯಾಲೆ ಇನ್ನೂ ಐತೆ. ಯ್ಯಾನು ಆಗ್ಲಿಲ್ಲವಲ್ಲ ಬುಡು. ಸುಮ್ನೆ ಅಳ್ತಾ ಇದ್ದಿಯಲ್ಲ, ಅಪ್ಪ ಯ್ಯಾಕೆ ಸಾಯೋಕೆ ಒಂಟಿದ್ದ ಅಂತ ಕೇಳ್ದ್ಯಾ."

ಸಣ್ಣೆ ಏಳ್ದ ಮ್ಯಾಕೆ ಗಂಡಾ ಯಾಕೆ ಸಾಯೋಕೆ ವೊಂಟಿದ್ದ ಅಂತ ಕ್ಯಾಳ್ಬೇಕು ಅನ್ನೊದು ಅರ್ಥ್ವಾಗಿ ಕಣ್ಣರಳ್ಸಿಕೊಂಡು ಮೂಗು ವರ್‍ಸಿಕೊಳ್ತಾ ಸೊರ ಸೊರ ಅಂತನೇ "ಯಾಕಂತೆ, ನಿಮ್ಮಪ್ಪಂಗೆ ಏನು ಗುನಗು ಆಗಿತ್ತು, ಮಗಳ ಮದ್ವಿಗೆ ಒಂದ್ಕಾಸು ಖರ್ಚಾಗ್ತಾ ಇಲ್ವಲ್ಲ ಆದ್ಕಾ, ಯಾರೋ ಪುಣಾತ್ಮರು ಗಂಡು ಕರ್ಕೊಂಡು ಬಂದ್ರು, ಯ್ಯಾನೊ ನಿನ್ನ ಪುಣ್ಯ ವೈನಾಗಿತ್ತು. ನಿನ್ನ ನೋಡಿದ ಚಣನೆ ಒಪ್ಕಂಡ್ಬುಟ್ಟರು. ದುಡ್ಡು ಕಾಸು, ವಡ್ವೆ ಗಿಡ್ವೆ ಯೋನೂ ಬ್ಯಾಡಾ, ನಾವೆ ತತ್ತಿವಿ ಅಂತ ಅಂದು ಬುಟ್ಟರು. ಸಾಲ್ದಕ್ಕೆ ಅವ್ರೆ ಖರ್ಚಾಕಂಡು ಮದ್ವೆ ಮಾಡ್ಕಾತಾ ಅವ್ರೆ. ಇನ್ನೇನು ಆಗ್ಬೇಕಿತಂತೆ ನಿಮ್ಮ ಅಪ್ಪಂಗೆ" ಗಂಡನನ್ನೇ ದುರು ದುರು ನೋಡುತ್ತಾ ಕೇಳಿದಳು.

ಗಂಡಾ ಸಾಯೋಕೆ ವೊಂಟಿದ್ದ ಅಂತ ಕೇಳಿದ ಕೂಡಲೆ ಎದೆ ಎದೆ ಬಡ್ಕೊಂಡು ದುಃಖದಿಂದ ಓಡಿ ಬಂದಿದ್ದ ಕೆಂಪಿ, ಗಂಡ ಸಾಯದೆ ಬದುಕಿದ್ದನ್ನು ಕಂಡು ಸಮಾಧಾನ ಮೂಡಿತ್ತು. ಆದರೆ, ದುಃಖದ ಜಾಗ್ದಲ್ಲಿ ಮಗ್ಳ ಮದ್ವೆ ಮುಂದಿಟ್ಕೊಂಡು ಸಾಯೋ ನಾಟ್ಕ ಆಡಿದ್ದ ಗಂಡನ ಮ್ಯಾಲೆ ಶಾನೆ ಸಿಟ್ಟು ಬಂದಿತ್ತು. ಆದ್ರೆ ಸಾಯೋ ಅಂತದ್ದೆನಾಯ್ತು ಈ ವಯ್ಯಂಗೆ ಅನ್ನೊ ವಿಚಾರ ಮಾತ್ರಾ ಆಗ ತಲೆ ಕೆಡಿಸ್ತು.

ಇನ್ನೂ ಅಳ್ತಾನೆ ಇದ್ದ ಮಗಳ್ನ ನೋಡ್ತಾ "ಯಾಕಮ್ಮಿ ನಿಮ್ಮಪ್ಪಯ್ಯಾಂಗೆ ಬಾವಿಗ್ಬಿದ್ದು ಪಿರಾಣ ಕಳ್ಕಳಂತದ್ದು ಯೊನಾಗಿತ್ತು, ನಿಂಗೊಂದ್ ಗಂಡು ಉಡುಕಿ ಲಗ್ಣ ಮಾಡೋಕಂತೂ ಯೋಗ್ತೆ ಇಲ್ಲಾ. ನಿನ್ನ ಗಾಚಾರ ನೆಟ್ಟಗಿತ್ತು. ಆ ದ್ಯಾವ್ರಲ್ಲಿ ಒಂದು ವೂವಾ ಎಚ್ಚಾಗಿ ಆಕಿದ್ಯೇನೊ ನಿಂಗೆ ಮದ್ವೆ ಆಗ್ತಾ ಐತೆ. ಯಾರೋ ಪುಣಾತ್ಮರು ಮದ್ವೆ ಮಾಡ್ಕತೀವಿ ಅಂತ ಬಂದವ್ರೆ. ಓಡಾಡ್ಕಂಡು ಮದ್ವೆ ಮಾಡೋದ್ದೋ ಬುಟ್ಟು ಇಲ್ಲಿ ಯಕ್ಷಗಾನ ಆಡೋಕೆ ಬಂದವ್ನ" ಅಂತ ಕೆಂಪಿ ರೇಗಿದಳು.

ಅಷ್ಟರಲ್ಲಿ ಪುಟ್ಟೀರ "ಅಲ್ಲ ಕಣಮ್ಮಿ, ಗಂಡಾ ಹೆಂಡ್ರೂ ಕುಂತ್ಕಂಡು ಮಗ್ಳ ಮದ್ವಿ ಮಾಡೋ ಇಚಾರನಾ ಮಾತಾಡ್ಕ ಬಾರ್‍ದ್ದಾ. ಈರಂಗೆ ಮಗಳ್ನ ಆ ಗಂಡಿಗೆ ಕೋಡೊಕೆ ಇಷ್ಟ ಇಲ್ವಂತೆ, ಮತ್ಯಾಕೆ ಲಗ್ನ ಇಡ್ಸಿದ್ರಿ, ಈ ಮದ್ವೆ ನಡೆದ್ರೆ ನಾ ಉಳಿಯ್ಯಾಕಿಲ್ಲ ಅಂತಾನೆ" ಅಂದಾಗ–

ಕೆಂಪಿ "ಮತ್ತೇನು ಮಿನಿಷ್ಟ್ರಿ ಮನೆ ಗಂಡ್ಗೆ ಕೊಡ್ತಾನಂತಾ, ಬ್ಯಾರೆ ಗಂಡ್ನೊಡೋಕೆ ದಮ್ ಐತಂತಾ ಈ ಕುಬೇರಂಗೆ. ಕೈಲಾಗ್ದಿದ್ರೂ ಈ ಯ್ಯಾಶಕ್ಕೇನು ಕಮ್ಮಿ ಇಲ್ಲ" ಎಂದು ಗಂಡನ ಮ್ಯಾಲೆ ಉರಿದು ಬಿದ್ದಳು.

"ಯವ್ವಾ, ನೀನು ಸುಮ್ಕೀರು, ನಾನು ಈ ಲಗ್ಣ ಮಾಡ್ಕಾಳಾಕಿಲ್ಲ. ಅಪ್ಪ ಯೇಳ್ದಂಗೆ ನಾನ್